ಅ) 1991ನೇ ಡಿಸೆಂಬರ್ ಅಂತ್ಯಕ್ಕೆ 14,23,280.

ಆ) 1989,1990 ಹಾಗೂ 1991ನೇ ಸಾಲಿನಲ್ಲಿ ಕ್ರಮವಾಗಿ 8,423, 8,398ಹಾಗೂ 14,084 ಅಭ್ಯರ್ಥಿಗಳಿಗೆ ಗುಂಪು 'ಸಿ'ಮತ್ತು 'ಡಿ' ಹುದ್ದೆಗಳಲ್ಲಿ ಉದ್ಯೋಗಾವಕಾಶ ದೊರಕಿಸಿಕೊಡಲಾಗಿದೆ.

ಇ) ಈ ಇಲಾಖೆಯಲ್ಲದೆ ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳಿಂದ ಮಾಹಿತಿಯನ್ನು ದೀರ್ಘ ಸಮಯ ಬೇಕಾಗಿರುವುದರಿಂದ ಸದ್ಯಕ್ಕೆ ಮಾಹಿತಿಯು ಲಭ್ಯವಿರುವುದಿಲ್ಲ.

ಈ) 1989,90 ಹಾಗೂ 1991ನೇ ಸಾಲಿನಲ್ಲಿ ಉದ್ಯೋಗ ಪಡೆದ ಒಟ್ಟು ಅಭ್ಯರ್ಥಿಗಳ ಪೈಕಿ 7724 ಹಿಂದುಳಿದ ವರ್ಗ ಹಾಗೂ 7581 ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದವರಾಗಿರುತ್ತಾರೆ.

ವಿಷಯ:ಮೊಳಕಾಲ್ಮೂರು ತಾಲ್ಲೂಕನ್ನು ಕತ್ತಲೆ ಪ್ರದೇಶವೆಂದು ಘೋಷಣೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1352 (1928)

ಶ್ರೀ ಎನ್. ಜಿ. ನಾಯಕ್ (ಮೊಳಕಾಲ್ಮೂರು) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ. ?

1. ಮೊಳಕಾಲ್ಮೂರು ತಾಲ್ಲೂಕು ಕತ್ತಲೆ ಪ್ರದೇಶವೆಂದು ಘೋಷಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ?
2. ಹಾಗಿದ್ದಲ್ಲಿ ಯಾವಾಗ ಘೋಷಿಸಲಾಯಿತು ಮತ್ತು ಇದಕ್ಕೆ ಕಾರಣಗಳೇನು?
3. ಕತ್ತಲೆ ಪ್ರದೇಶವೆಂದು ಘೋಷಿಸಿರುವುದನ್ನು ತೆಗೆಯುವುದಕ್ಕೆ ಏನಾದರೂ ಕ್ರಮ ಸರ್ಕಾರ ದಲ್ಲಿದೆಯೇ ?
4. ಹಾಗಿದ್ದಲ್ಲಿ ಯಾವಾಗ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎಂ. ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು)

1. ಬಂದಿದೆ.
2. 1987 ರಲ್ಲಿ ಘೋಷಿಸಲಾಯಿತು. ಅಂತರ್ಜಲ ಬಳಕೆಯ ಪ್ರಮಾಣವು ವಾರ್ಷಿಕ ದೊರಕುವ ಭೂಜಲ ಪ್ರಮಾಣದ ಶೇಕಡಾ 85ಕ್ಕೂ ಹೆಚ್ಚಾಗಿದ್ದೇ ಇದಕ್ಕೆ ಕಾರಣ.
3. ಇಲ್ಲ.
4. ಉದ್ಭವಿಸುವುದಿಲ್ಲ.

ವಿಷಯ: 1992-93ನೇ ಸಾಲಿನಲ್ಲಿ ಮೆಡಿಕಲ್ ಕಾಲೇಜುಗಳ ಸ್ಥಾಪನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1353 (1930)

ಶ್ರೀ ಎನ್. ಜಿ. ನಾಯಕ್‌ರವರು (ಮೊಳಕಾಲ್ಮೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1992-93ನೇ ಸಾಲಿನಲ್ಲಿ ಮೆಡಿಕಲ್ ಕಾಲೇಜುಗಳನ್ನು ತೆಗೆಯಲು ಸರ್ಕಾರ ಉದ್ದೇಶಿಸಿದೆಯೇ ?

ಆ) ಹಾಗಿದ್ದಲ್ಲಿ ಎಷ್ಟು ಕಾಲೇಜುಗಳನ್ನು ತೆರೆಯಲಾಗುವುದು ಮತ್ತು ಯಾವ ಯಾವ ಜನಾಂಗಕ್ಕೆ ಎಂಬುದರ ಮಾಹಿತಿ ನೀಡುವುದು ?

ಇ) ಚಿತ್ರದುರ್ಗದ ಮಡಿಕೇರಿ ವಿದ್ಯಾ ಸಂಸ್ಥೆಯ ಹೆಣ್ಣು ಮಕ್ಕಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮೆಡಿಕಲ್ ಕಾಲೇಜು ತೆರೆಯ ಬೇಕೆಂದು ಕುವೆಂಪು ವಿಶ್ವವಿದ್ಯಾನಿಲಯದ ಮುಖಾಂತರ ಅರ್ಜಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ, ಈ ವಿಚಾರದ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇಲ್ಲ